ಸುಬ್ರಮಣ್ಯ ನಗರ ಹಾಗೂ ಮಲ್ಲೇಶ್ವರಂ ನಡುವೆ ಹೋಗುವ ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆ.

437 - ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಬ್ರಮಣ್ಯನಗರ 13ನೇ ಅಡ್ಡರಸ್ತೆಯಿಂದ ಮಲ್ಲೇಶ್ವರಂಗೆ ಹೋಗುವಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಆ ಕುರಿತಾಗಿ ಜರಗಿಸಿದ ಸಕಾಲಿಕ ಕ್ರಮಗಳೇನು?

ಇ) ಇಲ್ಲವಾದಲ್ಲಿ ತೊಂದರೆಗಳನ್ನು ನಿವಾರಿಸದಿರಲು ಕಾರಣವೇನು?

ಈ) ಈ ಕುರಿತಾಗಿ ಯಾವಾಗ ಕ್ರಮಗಳನ್ನು ಕೈಗೊಂಡು ಪೂರೈಸಲಾಗುವುದು?

ಉ) ಈಗಾಗಲೇ ಕ್ರಮ ಪ್ರಾರಂಭವಾಗಿದ್ದಲ್ಲಿ ಅದನ್ನು ಎಷ್ಟು ಸಮಯದೊಳಗಾಗಿ ಮುಗಿಸಲಾಗುವುದು?

ಶ್ರೀ ಬೌಡರೆಡ್ಡಿ (ನಗರಾಭಿವೃದ್ಧಿ ಸಚಿವರು.) :

ಅ) ಬಂದಿದೆ.

ಈ ಸ್ಥಳದಲ್ಲಿ ಪಾದಚಾರಿ ಕೆಳಸೇತುವೆ ಕಟ್ಟಲು ಸಾಧ್ಯತೆ ಇದ್ದು ಈ ಬಗ್ಗೆ ಸರ್ವೆ ಕಾರ್ಯವನ್ನು ಮಾಡಲಾಗಿದೆ. ಹಾಗೂ ಈ ಬಗ್ಗೆ ರೈಲ್ವೆ ಇಲಾಖೆಯವರ ಜತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ಸಕ್ಕರೆ ಕಾರ್ಖಾನೆಗಳು.

617 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಕಾರ ಮತ್ತು ಖಾಸಗಿ ವಲಯಗಳಲ್ಲಿ ಮಂಜೂರ್ಮಾಡಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ರೈತರು ಬೆಳೆಯುವ ಒಟ್ಟು ಕಬ್ಬಿನ ಪ್ರಮಾಣ ಎಷ್ಟು?

ಇ) ಆ ಪ್ರಮಾಣಕ್ಕೆ ತಕ್ಕಂತೆ ಕಬ್ಬನ್ನು ಅರೆಯಲು ಸಾಕಷ್ಟು ಸಕ್ಕರೆ ಕಾರ್ಖಾನೆಗಳು ಇವೆಯೇ?

ಈ) ಇಲ್ಲದಿದ್ದಲ್ಲಿ ಬೆಲ್ಲ ಮಾಡುವಲ್ಲಿ ರೈತರಿಗೆ ಸಹಾಯ ಮಾಡಲು ಸರಕಾರವು ಸಾಕಷ್ಟು ಸಕ್ಕರೆ ಕಾರ್ಖಾನೆಗಳನ್ನು ತೆರೆಯುವ ಕ್ರಮವನ್ನು ತೆಗೆದುಕೊಳ್ಳುವುದೇ?

ಡಾ: ಹೆಗ್ಗಪ್ಪ ಲಮಾಣಿ (ಸಕ್ಕರೆ ಸಚಿವರು.) :

ಅ) ಕೇಂದ್ರ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಅನುಮತಿ ನೀಡಿರುವುದಿಲ್ಲ. ಆದರೆ ರಾಜ್ಯ ಸರ್ಕಾರವು ರಾಜ್ಯದಲ್ಲಿ ಇನ್ನೂ 14 ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗಾಗಿ ಅನುಮತಿ ಪತ್ರ (ಸಹಕಾರಿ ವಲಯದಲ್ಲಿ ಆರು ಹಾಗೂ ಖಾಸಗಿ ವಲಯದಲ್ಲಿ ಎಂಟು) ನೀಡಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ. ಈ ಪೈಕಿ 7 ಕಾರ್ಖಾನೆಗಳಿಗೆ ಅನುಮತಿ ಪತ್ರ ನೀಡಲು ಕೇಂದ್ರ ಪರಿಶೀಲನಾ ಸಮಿತಿ ಒಪ್ಪಿರುವುದಾಗಿ ತಿಳಿದುಬಂದಿದೆ.

ಆ) 1993-94ರ ಸಾಲಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಸುಮಾರು 175.49 ಲಕ್ಷ ಮೆ.ಟನ್ ಕಬ್ಬು ಉತ್ಪಾದನಾದನೆಯಾಗಿರುತ್ತದೆ.

ಇ) ಪ್ರಸ್ತುತ ರಾಜ್ಯದಲ್ಲಿ ರೈತರು ಬೆಳೆಯುವ ಎಲ್ಲಾ ಕಬ್ಬನ್ನು ಅರೆಯಲು ಸಾಕಾಗುವಷ್ಟು ಸಕ್ಕರೆ ಕಾರ್ಖಾನೆಗಳು ಇರುವುದಿಲ್ಲ. ಈ ಕಾರಣದಿಂದಲೇ ಹೊಸ

ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಹಾಗೂ ಕೆಲವು ಕಾರ್ಖಾನೆಗಳ ಹಾಲಿ ಇರುವ ಸಾಮರ್ಥ್ಯ ವಿಸ್ತರಣೆಗೆ ಸರ್ಕಾರವು ಕ್ರಮ ಕೈಗೊಂಡಿದೆ.

ಈ) ಬೆಲ್ಲದ ಬೆಲೆಯಲ್ಲಿ ಸಾಮಾನ್ಯವಾಗಿ ಏರಿಕೆ ಸ್ಥಿರವಾಗಿರುವುದಿಲ್ಲ. ಬೆಲ್ಲದ ಬೆಲೆಯಲ್ಲಿ ಏರು ಪೇರು ಉಂಟಾಗುತ್ತಿರುತ್ತದೆ. ಆಗ ಕಬ್ಬಿನ ಗಾಣದ ಮಾಲೀಕರು ಕೊಡುವ ಕಬ್ಬಿನ ಬೆಲೆಯಲ್ಲೂ ಏರು ಪೇರಾಗುತ್ತದೆ. ಬೆಲ್ಲದ ಬೆಲೆ ಕುಸಿದಾಗ ಕಬ್ಬಿನ ಗಾಣಗಳು ಸ್ಥಗಿತಗೊಂಡು ರೈತರು ಉತ್ಪಾದಿಸಿದ ಕಬ್ಬನ್ನು ಅರೆಯಲು ಸಾಕಷ್ಟು ವ್ಯವಸ್ಥೆ ಇಲ್ಲದಂತಹ ಪರಿಸ್ಥಿತಿ ಉಂಟಾಗುತ್ತದೆ. 1990-91 ಮತ್ತು 1991-92ನೇ ಸಾಲುಗಳಲ್ಲಿ ಈ ಅನುಭವ ರಾಜ್ಯದಲ್ಲಿ ಉಂಟಾಗಿರುತ್ತದೆ. ಅಲ್ಲದೆ, ಕಬ್ಬಿನ ರಸ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ಗಾಣಗಳಿಗಿಂತ ಬಹಳ ಉತ್ತಮವಾಗಿರುತ್ತದೆ. ರೈತರು ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗಳ ಮೂಲಕ ಅರೆಯುವಂತಾಗುವ ಒಂದು ಶಾಶ್ವತ ವ್ಯವಸ್ಥೆ ಏರ್ಪಾಟು ಮಾಡುವುದು ಮತ್ತು ಆ ನಿಟ್ಟಿನಲ್ಲಿ ಪ್ರೋತ್ಸಾಹ ನೀಡುವುದು ರೈತರ, ರಾಜ್ಯದ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಒಳ್ಳೆಯದಾಗಿರುತ್ತದೆ.

ಮುಳಬಾಗಿಲು ಟೌನ್ನಲ್ಲಿ ಎಸ್.ಸಿ.ಕಾಲೇಜು ವಿದ್ಯಾರ್ಥಿನಿಲಯ.

714 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಲು) : ಮಾನ್ಯ ಸಮಾಜ ಕಲ್ಯಾಣ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ. ಮುಳಬಾಗಲು ಪಟ್ಟಣದಲ್ಲಿ ಹರಿಜನ ಗಿರಿಜನ ಕಾಲೇಜು ವಿದ್ಯಾರ್ಥಿನಿಲಯ ಕಟ್ಟಲು ಯಾವಾಗ ಪ್ರಾರಂಭಿಸಲಾಯಿತು.

ಆ. ಅದರ ಒಟ್ಟು ಅಂದಾಜು ವೆಚ್ಚ ಎಷ್ಟು ಮತ್ತು ಒಟ್ಟು ಎಷ್ಟು ಕಟ್ಟಡಗಳನ್ನು ಕಟ್ಟಲಾಗುವುದು.

ಇ. ಇಷ್ಟು ವರ್ಷ ಆದರೂ ಮಂಜೂರಾತಿ ಕೊಡಲು ನಿಧಾನವಾಗಿರುವುದಕ್ಕೆ ಕಾರಣಗಳೇನು.

ಈ. ತಾಲ್ಲೂಕು ಸಮಿತಿ ಮತ್ತು ಜಿಲ್ಲಾ ಪರಿಷತ್ತಿನ ಹಣದಿಂದ ಆ ಕಟ್ಟಡ ಕಟ್ಟಲು ಪ್ರಾರಂಭ ಮಾಡಲು ಅನುಮತಿ ಕೊಡಲು ಇರುವ ತೊಂದರೆಗಳೇನು.

ಉ. ಕನಿಷ್ಠ ಮೊದಲನೆಯ ಅಂತಸ್ತನ್ನಾದರೂ ಕಟ್ಟಲು ಅನುಮತಿ ನೀಡಲಾಗುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) :

ಅ. ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿ ಇನ್ನೂ ಪ್ರಾರಂಭಿಸಿರುವುದಿಲ್ಲ.

ಆ. ಸದರಿ ವಿದ್ಯಾರ್ಥಿನಿಲಯ ಕಟ್ಟಡದ ಅಂದಾಜು ವೆಚ್ಚ ರೂ. 30.00 ಲಕ್ಷ. ಒಂದು ಕಟ್ಟಡ ಕಟ್ಟಲಾಗುವುದು.

ಇ. ಸದರಿ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣವನ್ನು ಜಿಲ್ಲಾ ಪಂಚಾಯತ್ ವತಿಯಿಂದ ಕಟ್ಟುವ ಷರತ್ತಿನ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ: ಎಸ್ಡಬ್ಲ್ಯೂಎಲ್. 396 ಎಸ್ಇಡಬ್ಲ್ಯೂ 90 ದಿ. 12-2-92ರಲ್ಲಿ ರೂ. 25 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿತ್ತು. ಆದರೆ 1991-92 ಮತ್ತು 92-93ನೇ ಸಾಲಿನ ಜಿಲ್ಲಾ ಆಯವ್ಯಯದಲ್ಲಿ ಜಿಲ್ಲಾ ಪರಿಷತ್ತಿನವರು ಈ ವಿದ್ಯಾರ್ಥಿನಿಲಯದ ನಿರ್ಮಾಣಕ್ಕಾಗಿ ಹಣ ಒದಗಿಸಿಕೊಳ್ಳದ್ದಿದ್ದುದೇ ನಿಧಾನಕ್ಕೆ ಕಾರಣವಾಗಿದೆ.

ಈ) ಮತ್ತು ಉ) ಯಾವುದೇ ತೊಂದರೆ ಇರುವುದಿಲ್ಲ. ಸದರಿ ಕಟ್ಟಡದ ನಿರ್ಮಾಣಕ್ಕಾಗಿ ಜಿಲ್ಲಾ ಪರಿಷತ್ತು ಕಾಲು ಭಾಗದ ಹಣವನ್ನು ಒದಗಿಸಿಕೊಂಡಿರುವುದರಿಂದ 30.00 ಲಕ್ಷ ರೂ.ಗಳ ಪರಿಷ್ಕೃತ ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಅವರಿಂದ ಬಂದ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ 22-3-94ರಂದು ಸರ್ಕಾರ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಸಕಇ 321 ಪಕವಿ 91ರಲ್ಲಿ ಈಗಾಗಲೇ ನೀಡಲಾಗಿದೆ.